ಸುವರ್ಣ ಕರ್ನಾಟಕ ಪ್ರಶಸ್ತಿ ಪುರಸ್ಕೃತ

samyuktha karnataka

# ಸಂಯುಕ್ತ ಕರ್ನಾಟಕ

ಕನ್ನಡಿಗರ ಸಾಕ್ಷಿಪ್ರಜ್ಞೆ

₹ 5-00

ಶತಕದತ್ತ ಓಟ... ತೊಂಭತ್ತರ ನೋಟ

ಕಲಬುರಗಿ Kalaburagi | ಹುಬ್ಬಳ್ಳಿ Hubballi | ಬೆಂಗಳೂರು Bengaluru | ಮಂಗಳೂರು Mangaluru | ದಾವಣಗೆರೆ Davanagere | ಬಾಗಲಕೋಟೆ Bagalakote | ಸಂಪುಟ Volume 23 | ಸಂಚಿಕೆ Issue 211 | ಪುಟ Pages 12

ಮಂಗಳವಾರ 14 ಡಿಸೆಂಬರ್ 2021

RNI REGN NO. KARKAN/1999/2674

ತಾಜಾ ಸುದ್ದಿಗಳಿಗಾಗಿ ನಮ್ಮ ಜಾಲತಾಣಗಳಿಗೆ ಭೇಟಿ ನೀಡಿ

www.epaper.samyukthakarnataka.com

Samyuktha Karnataka @samyuktakarnat2

### ಮುಂಬೈ ಖಾಸಗಿ ಸಂಸ್ಥೆಯ ಸಹಕಾರ ★ ಕೆಲ ವರ್ಷ ತಿರುಪತಿ....ಇನ್ನಷ್ಟು ವರ್ಷ ಮುಂಬೈನಲ್ಲಿ ವಾಸ

## ಹದಿನೈದು ವರ್ಷದಿಂದ ಕಾಣೆಯಾದ ಬಾಲಕಿ ಮಗುವಿನೊಂದಿಗೆ ವಾಪಸ್

**ಸಂ.ಕ.ಸಮಾಚಾರ ಶಹಾಬಾದ:** ನಗರದ ಹಳೆಯ ಶಹಾಬಾದನ ಶಿಬಿರಕಟ್ಟಾ ಬಡಾವಣೆಯ ಬಾಲಕಿಯೊಬ್ಬಳು 15 ವರ್ಷಗಳ ಹಿಂದೆ ಕಾಣೆಯಾಗಿ, ಈಗ ಮುಂಬೈ ಖಾಸಗಿ ಸಂಸ್ಥೆಯ ಸಹಕಾರದೊಂದಿಗೆ ಒಂದು ಮಗುವಿನೊಂದಿಗೆ ಮನೆಗೆ ವಾಪಸ್ ಆಗಿರುವ ಘಟನೆ ನಡೆದಿದೆ.

ಸಂಗೀತಾ ದಾನಪ್ಪಗೋಳ 15 ವರ್ಷಗಳ ಹಿಂದೆ 8ನೇ ತರಗತಿ ಓದುತ್ತಿದ್ದ ಸಂದರ್ಭದಲ್ಲಿ ಮಾನಸಿಕ ಅಸ್ವಸ್ಥಳಾಗಿದ್ದಾಗ ಕಾಣೆಯಾಗಿದ್ದಳು, ಪೋಷಕರು ಹುಡುಕಿ ಕೈಚೆಲ್ಲಿದ್ದರು. ಇಲ್ಲಿಂದ ಹೋಗಿದ್ದ ಬಾಲಕಿ ತಿರುಪತಿ ತಿಮ್ಮಪ್ಪನ ಸನ್ನಿಧಿಯಲ್ಲಿ, ಎಲ್ಲೆಲ್ಲೊ ಕೆಲಸ ಮಾಡಿಕೊಂಡಿದ್ದು. ಲಾರಿ ಚಾಲಕನೊಬ್ಬನನ್ನು ಮದುವೆಯಾಗಿದ್ದಳು. ಅವನಿಂದ ಒಂದು ಗಂಡು ಮಗುವನ್ನು ಪಡೆದಿದ್ದಾಳೆ, 2-3 ವರ್ಷ ಅವನೊಂದಿಗೆ ದಾಂಪತ್ಯ ಜೀವನ ಸಾಗಿಸಿದ್ದಳು. ಲಾರಿ ಚಾಲಕ ಅವಳನ್ನು ಬಿಟ್ಟು ಹೋಗಿದ್ದ, ನಂತರ ತನ್ನ ಮಗುವಿನೊಂದಿಗೆ ಮುಂಬೈಗೆ ಹೋಗಿದ್ದಳು ಅಲ್ಲಿ ರಸ್ತೆ ಪಕ್ಕದಲ್ಲಿಯೆ ಇದ್ದು, ಅಲ್ಲಲ್ಲಿ ಕೆಲಸ ಮಾಡಿ, ಮಗುವಿನೊಂದಿಗೆ ಜೀವನ ಸಾಗಿಸುತ್ತಿದ್ದಳು. ಇಷ್ಟು ದಿನದಿಂದ ದೂರವಿದ್ದ ಅವಳಿಗೆ ಕನ್ನಡ ಭಾಷೆ ಹೆಚ್ಚುಕಮ್ಮಿ ಮರೆತು ಹೋಗಿದ್ದು, ತೆಲುಗು ಮಾತನಾಡುತ್ತಿದ್ದಳು, ಅಲ್ಪಸ್ವಲ್ಪ ಕನ್ನಡ ಭಾಷೆ ನೆನಪಿನಲ್ಲಿದೆ.

ಮಗುವಿನೊಂದಿಗೆ ಅನಾಥವಾಗಿದ್ದ ಮಹಿಳೆ ಮುಂಬೈನ ಶ್ರದ್ಧಾ ರೇಗುಲೇಷನ್ ಫೌಂಡೇಷನ್ ಅವರ ಕಣ್ಣಿಗೆ ಬಿದ್ದಿದ್ದಾಳೆ, ಫೌಂಡೇಷನ್ ನಿರ್ದೇಶಕ, ಮಾನಸಿಕ ರೋಗ ತಜ್ಞ ಡಾ.ಭಾರತ ವಾಟವನಿ ಅವರು ತಮ್ಮ ವೃತ್ತಿಯಿಂದ ಬಂದ ಆದಾಯದ ಬಹುಭಾಗವನ್ನು ಈ ರೀತಿ ಮಾನಸಿಕ ಅಸ್ವಸ್ಥರ ಚಿಕಿತ್ಸೆಗೆ ಬಳಸುತ್ತಿದ್ದು, ಅವರು ಈ ಮಹಿಳೆಗೆ ತಮ್ಮ ಆಸ್ಪತ್ರೆಯಲ್ಲಿ ಮಾನಸಿಕ ಚಿಕಿತ್ಸೆ ನೀಡಿದ್ದಾರೆ. ಸ್ವಲ್ಪ ಸುಧಾರಿಸಿದ ನಂತರ ಅವರು ಮಹಿಳೆಯ ಮಾಹಿತಿ ಅನುಸರಿಸಿ ಫೌಂಡೇಷನ್



ಶಹಾಬಾದ ನಗರದ ಪೊಲೀಸ್ ಠಾಣೆಯಲ್ಲಿ 15 ವರ್ಷದಿಂದ ಕಾಣೆಯಾದ ಮಹಿಳೆ, ಮಗುವನ್ನು ಮುಂಬೈನ ಶ್ರದ್ಧಾ ರೇಗುಲೇಷನ್ ಫೌಂಡೇಷನ್‌ನ ಸಮಾಜ ಸೇವಕರು, ಪೋಲಿಸರ ಸಮ್ಮುಖದಲ್ಲಿ ಪೋಷಕರಿಗೆ ಒಪ್ಪಿಸಿದರು. ಸೂರ್ಯಕಾಂತ ಕೋಬಾಳ, ಸಂಗೀತಾ ದಾನಪ್ಪಗೋಳ, ಸುಲೋಚನಾ ಆರಿ, ಅದಿತಿ ಸೇಜಲ್ ಇತರರು ಇದ್ದರು.

- ಯುವತಿಯನ್ನು ಅವರ ಸಹೋದರ ರವಿಕುಮಾರ ಅವರ ಸುಪರ್ದಿಗೆ ಒಪ್ಪಿಸಲಾಗಿದೆ.

ಸಹಾಯಕ ನಿರ್ದೇಶಕಿ ಸುಲೋಚನಾ ಆರಿ, ಸಾಮಾಜಿಕ ಕಾರ್ಯಕರ್ತೆ ಅದಿತಿ ಸೇಜಲ್ ಅವರೊಂದಿಗೆ ತಾಯಿ ಮಗುವಿಗೆ ತಿರುಪತಿಗೆ ಕಳುಹಿಸಿದ್ದಾರೆ. ಅಲ್ಲಿ ಮಹಿಳೆ ಗಂಡನ ಬಗ್ಗೆ ಸೂಕ್ತ ಮಾಹಿತಿ, ಸಿಗದೆ ಇದ್ದು, ಈ ಮಹಿಳೆ ಬಾಲಕಿಯಾಗಿದ್ದಾಗ ಶಹಾಬಾದದಿಂದ ಬಂದಿದ್ದಾಳೆ ಎಂದು ತಿಳಿದು ಬಂದಿದ್ದರಿಂದ ಅವರನ್ನು ಶಹಾಬಾದ್ ಠಾಣೆಗೆ ಕರೆದುಕೊಂಡು ಬಂದಿದ್ದಾರೆ. ಇಲ್ಲಿ ಪೊಲೀಸರ ಸಹಾಯದಿಂದ, ಈ ಮಹಿಳೆ ವೀರಶೈವ ಲಿಂಗಾಯತ ಸಮಾಜಕ್ಕೆ ಸೇರಿದ್ದನ್ನು ಅರಿತು, ಸಮಾಜದ ಸ್ಥಳೀಯ ಅಧ್ಯಕ್ಷ ಸೂರ್ಯಕಾಂತ ಕೋಬಾಳ ಅವರನ್ನು ಸಂಪರ್ಕಿಸಿ, ಅವರ ಪೋಷಕರ ಪತ್ತೆ ಹಚ್ಚಿದ್ದಾರೆ.

ಮಹಿಳೆಯ ತಂದೆ ದಾನಪ್ಪ ಅವರ ಮೊದಲ ಪತ್ನಿಯ ಪುತ್ರಿಯಾಗಿದ್ದು, ಎರಡನೇ ಪತ್ನಿಗೆ ಇಬ್ಬರು ಮಕ್ಕಳು ಇದ್ದಾರೆ ಎನ್ನಲಾಗಿದೆ. ಯುವತಿಯನ್ನು ಅವರ ಸಹೋದರ ರವಿಕುಮಾರ ಅವರ ಸುಪರ್ದಿಗೆ ಒಪ್ಪಿಸಿದ್ದಾರೆ. ಮಾನಸಿಕ ಅಸ್ವಸ್ಥ ಮಹಿಳೆಗೆ ಶ್ರದ್ಧಾ ಸಂಸ್ಥೆ ಮುಂದಿನ 2 ವರ್ಷ ತಮ್ಮ ಖರ್ಚಿನಲ್ಲಿ ಮಾನಸಿಕ ಚಿಕಿತ್ಸೆ ನೀಡುವದಾಗಿ ಹೇಳಿ, 8-9 ವರ್ಷದ ಮಗನಿಗೆ ಶಾಲೆಗೆ ಸೇರಿಸಲು ನಿರ್ದೇಶನ ನೀಡಿದ್ದಾರೆ.

ಪೊಲೀಸರಾದ ಹುಸೇನ್ ಪಾಶಾ, ಶಿವರಾಜ, ಹೇಮಲತಾ, ಶರಣಯ್ಯ ಸ್ವಾಮಿ ಎಂ.ಆರ್. ಇದ್ದರು.